**ಎಂ.ವಿ.ಸಿ. 516/2025, ಪಿ.ಡಬ್ಲ್ಯೂ-1 ಹೆಸರುಃ ಗೋಣಿ ಬಸವರಾಜಪ್ಪ**

**ದಿಃ04-02-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಬಿ.ಜೆ.ಎಂ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಚಿಕ್ಕಜಾಜೂರು ಪೊಲೀಸ್ ಠಾಣೆಯ ಠಾಣಾ ಮೊಖದ್ದಮೆ ಸಂಖ್ಯೆ 201/2024 ಕ್ಕೆ ಸಂಬಂಧಿಸಿದ ದೂರು, ಪ್ರಥಮ ವರ್ತಮಾನ ವರದಿ, ಮಹಜರು, ವಾಹನ ಅಮಾನತ್ತು ಪಂಚನಾಮೆ, ಗಾಯದ ಪ್ರಮಾಣ ಪತ್ರ, ವಾಹನ ತಪಾಸಣ ವರದಿ ಮತ್ತು ದೋಷಾರೋಪಣ ಪಟ್ಟಿಯ ದೃಡೀಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.1 ರಿಂದ 7 ಎಂದು ಗುರುತಿಸಲಾಯಿತು. ದಾವಣಗೆರೆ ಜಿಲ್ಲಾ ಆಸ್ಪತ್ರೆರವರು ನೀಡಿರುವ ಹೊರರೋಗಿ ಚಿಕಿತ್ಸೆಯ ಕಾರ್ಡನ್ನು ಹಾಜರುಪಡಿಸಿದ್ದು ನಿಪಿ.8 ಎಂದು ಗುರುತಿಸಲಾಯಿತು. ಬಾಪೂಜಿ ಆಸ್ಪತ್ರೆ, ದಾವಣಗೆರೆ ರವರು ನೀಡಿರುವ ಬಿಡುಗಡೆ ಸಾರಾಂಶವನ್ನು ಹಾಜರುಪಡಿಸಿದ್ದು ನಿಪಿ.9 ಎಂದು ಗುರುತಿಸಲಾಯಿತು. 6 ಸ್ಕಾನಿಂಗ್ ವರದಿಗಳನ್ನು ಹಾಜರುಪಡಿಸಿದ್ದು ಒಟ್ಟಾಗಿ ನಿಪಿ.10 ಎಂದು ಗುರುತಿಸಲಾಯಿತು. ಜಿಲ್ಲಾ ಆಸ್ಪತ್ರೆ, ದಾವಣಗೆರೆರವರು ನೀಡಿರುವ ವರದಿಯನ್ನು ಹಾಜರುಪಡಿಸಿದ್ದು ನಿಪಿ.11 ಎಂದು ಗುರುತಿಸಲಾಯಿತು. ಬಾಪೂಜಿ ಆಸ್ಪತ್ರೆರವರು ನೀಡಿರುವ ರಕ್ತದ ಪರೀಕ್ಷ ವರದಿಯನ್ನು ಹಾಜರುಪಡಿಸಿದ್ದು ನಿಪಿ.12 ಎಂದು ಗುರುತಿಸಲಾಯಿತು. ನನ್ನ ಹೆಸರಿನಲ್ಲಿ ಇಂಗಳದಹಳ್ಳಿಯ ಸ.ನಂ.28/1 ರಲ್ಲಿ ಜಮೀನು ಇರುವ ಬಗ್ಗೆ ಪಹಣಿಯನ್ನು ಹಾಜರುಪಡಿಸಿದ್ದು ನಿಪಿ.13 ಎಂದು ಗುರುತಿಸಲಾಯಿತು. ಎರಡು ವೈದ್ಯಕೀಯ ಸಲಹಾ ಚೀಟಿಗಳನ್ನು ಹಾಜರುಪಡಿಸಿದ್ದು ನಿಪಿ.14 ಮತ್ತು 15 ಎಂದು ಗುರುತಿಸಲಾಯಿತು. 6 ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ್ದು ನಿಪಿ.16(1) ರಿಂದ 16(6) ಎಂದು ಗುರುತಿಸಲಾಯಿತು. ಒಂದು ಕ್ಷ ಕಿರಣವನ್ನು ಹಾಜರುಪಡಿಸಿದ್ದು ನಿಪಿ.17 ಎಂದು ಗುರುತಿಸಲಾಯಿತು. ಮೂರು ಎಂ.ಆರ್.ಐ. ಸ್ಕಾನಿಂಗ್‌ಗಳನ್ನು ಹಾಜರುಪಡಿಸಿದ್ದು ನಿಪಿಒ.18 ರಿಂದ 20 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ